**:: COMPROMISE DECREE BEFORE LOK ADALATH ::**

**IN THE COURT OF THE SENIOR CIVIL JUDGE AND J.M.F.C. H.D.KOTE**

**O.S. NO: 216/2025**

| | | |
|---|---|---|
| ವಾದಿ | : | ಶ್ರೀಮತಿ. ಸಣ್ಣಮ್ಮ ಕೋಂ ನಂಜುಂಡಸ್ವಾಮಿ.ಎಂ<br>ವಯಸ್ಸು ಸುಮಾರು 37 ವರ್ಷ,<br>ವಾಸ:- #2291, 1 ನೇ ಫ್ಲೋರ್,<br>2 ನೇ ಫೇಸ್, 4 ನೇ ಹಂತ,<br>ವಿಜಯನಗರ, ಮೈಸೂರು ಸಿಟಿ-570032.<br><br>(By Puttaswamy K Advocate) |

ವಿರುದ್ಧ

| | | |
|---|---|---|
| ಪ್ರತಿವಾದಿಗಳು | :1. | ಶ್ರೀಮತಿ. ಮಾಲಮ್ಮ ಕೋಂ ಬಸವೇಗೌಡ,<br>ವಯಸ್ಸು ಸುಮಾರು 59 ವರ್ಷ |
| | 2. | (ಬಸವೇಗೌಡ ಬಿನ್ ಲೇ.ಬೀರೇಗೌಡ, ಇವರು ಮರಣ ಹೊಂದಿರುತ್ತಾರೆ) ವಯಸ್ಸು ಸುಮಾರು 74 ವರ್ಷ, |
| | 3. | ಬಸವರಾಜು ಬಿನ್ ಬಸವೇಗೌಡ,<br>ವಯಸ್ಸು ಸುಮಾರು 37 ವರ್ಷ |
| | 4. | ಮಾನ್ಯ ಬಿನ್ ಬಸವರಾಜು,<br>ವಯಸ್ಸು ಸುಮಾರು 16 ವರ್ಷ, |
| | 5. | ಮೇಘನ ಬಿನ್ ಬಸವರಾಜು,<br>ವಯಸ್ಸು ಸುಮಾರು 14 ವರ್ಷ, ಪ್ರತಿವಾದಿ 4 ಮತ್ತು 5 ರವರುಗಳು ಅಪ್ರಾಪ್ತ ವಯಸ್ಕರರಾಗಿರುವುದರಿಂದ ಇವರುಗಳ ಪರವಾಗಿ ಮೈನರ್‌ಗಾರ್ಡಿಯನ್ನಾಗಿ 3 ನೇ ಪ್ರತಿವಾದಿ ಬಸವರಾಜು ರವರು ಪ್ರತಿನಿಧಿಸಿರುತ್ತಾರೆ. |
| | 6. | ಸುಶೀಲ ಕೋಂ ಬಸವರಾಜು,<br>ವಯಸ್ಸು ಸುಮಾರು 33 ವರ್ಷ, |

7. ತಮ್ಮಣ್ಣ ಬಿನ್ ಬಸವೇಗೌಡ,
ವಯಸ್ಸು ಸುಮಾರು 29 ವರ್ಷ
ಮನ್ವಿತ ಬಿನ್ ತಮ್ಮಣ್ಣ,
ವಯಸ್ಸು ಸುಮಾರು 6 ವರ್ಷ,

9. ರುತ್ವಿಕ್‌ಗೌಡ ಬಿನ್ ತಮ್ಮಣ್ಣ, ವಯಸ್ಸು
ಸುಮಾರು 4 ವರ್ಷ, ಪ್ರತಿವಾದಿ 8 ಮತ್ತು 9
ರವರುಗಳು ಅಪ್ರಾಪ್ತ
ವಯಸ್ಕರರಾಗಿರುವುದರಿಂದ ಇವರುಗಳ
ಪರವಾಗಿ ಮೈನರ್‌ಗಾರ್ಡಿಯನ್ನಾಗಿ 7 ನೇ
ಪ್ರತಿವಾದಿ ತಮ್ಮಣ್ಣ ರವರು
ಪ್ರತಿನಿಧಿಸಿರುತ್ತಾರೆ.

10. ಮಮತ.ಜಿ.ಕೆ ಕೋಂ ತಮ್ಮಣ್ಣ,
ವಯಸ್ಸು ಸುಮಾರು 24 ವರ್ಷ,

11. ಸಾಕಮ್ಮ ಕೋಂ ಬಸವೇಗೌಡ,
ವಯಸ್ಸು ಸುಮಾರು 54 ವರ್ಷ,

12. ಪವಿತ್ರ ಕೋಂ ಲೇ.ಮಹೇಶ,
ವಯಸ್ಸು ಸುಮಾರು 38 ವರ್ಷ,

13. ಆಕಾಶ್.ಎಂ ಬಿನ್ ಲೇಟ್.ಮಹೇಶ,
ವಯಸ್ಸು ಸುಮಾರು 17 ವರ್ಷ, ಇವರು
ಅಪ್ರಾಪ್ತ ವಯಸ್ಕರನಾಗಿರುವುದರಿಂದ ಇವರ
ಪರವಾಗಿ ಮೈನರ್‌ಗಾರ್ಡಿಯನ್ನಾಗಿ 12 ನೇ
ಪ್ರತಿವಾದಿ ಪವಿತ್ರ ರವರು
ಪ್ರತಿನಿಧಿಸಿರುತ್ತಾರೆ.

14. ಅವಿನಾಶ್.ಎಂ ಬಿನ್ ಲೇ.ಮಹೇಶ,
ವಯಸ್ಸು ಸುಮಾರು 18 ವರ್ಷ

15. ಸವಿತ ಬಿನ್ ಬಸವೇಗೌಡ, ಕೋಂ ಶ್ರೀನಿವಾಸ,
ವಯಸ್ಸು ಸುಮಾರು 37 ವರ್ಷ ಎಲ್ಲರ
ವಾಸ:- ಶಿಂಡೇನಹಳ್ಳಿ ಗ್ರಾಮ, ಹಂಪಾಪುರ
ಹೋಬಳಿ,ಹೆಚ್.ಡಿ.ಕೋಟೆ ತಾಲ್ಲೂಕು,
ಮೈಸೂರು ಜಿಲ್ಲೆ.

(By S.H Advocate for
defendant No. 1 to 15)

**SUIT FILED ON:26.11.2025**

**Suit claim:** The plaintiff most humbly prays that this honorable court be pleased to pass a judgment and decree for specific performance of contract-direct the defendants receive the balance consideration amount of Rs. 1,00,000/- (one lakh rupees) to execute regular sale deed before sub registrar office and to hand over the suit schedule property,
if the defendants fails to execute regular sale deed, this honorable court may kindly be appointed court commissioner for executing sale deed, and grant such other reliefs as the honorable court deems fit to grant under the circumstances of the case, in the interest of justice and equity.

Plaintiff, defendants and their respective counsels have filed a Compromise petition on 14.03.2026 before this court. Hence this case came before the Lok-Adalath on 14th day of March, 2026 for final disposal in the presence of **Judicial conciliator Sri. Mahesh B.T., B.com., LLM., Senior Civil Judge & J.M.F.C, H.D.Kote**, and **non-judicial conciliator Sri Kumar** in the presence of Sri. **P.K., advocate for the plaintiff** and **Sri S.H., advocate for the defendant No. 1 to 15.** The following order was passed.

The case is called before Lok-adalath. Parties and their respective counsels are present and have settled the matter amicably and filed a compromise petition U/O 23 Rule 3 of CPC and its contents are read over and explained to the parties in the language known to them and have agreed and accepted the terms and conditions of the compromise petition which seems to be lawful and voluntarily one. Therefore, the compromise petition is accepted and the suit is decreed in terms of compromise petition.

ದಿವಾನಿ ಪಕ್ರಿಯಾ ಸಂಹಿತೆ ಆದೇಶ **23** ನಿಯಮ **3** ರ ರೀತ್ಯಾ ಸಲ್ಲಿಸಲಾದ ಅರ್ಜಿ**.**

ವಾದಿ ಮತ್ತು ಪ್ರತಿವಾದಿಯು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ,

1. ವಾದಿಯು ಪ್ರತಿವಾದಿಗಳ ವಿರುದ್ಧ ನಿರ್ದಿಷ್ಟ ಕರಾರು ಅನುಷ್ಠಾನ ಕಾಯ್ದೆ (Suit for Specific Performance of Contract) ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯು ದಾವಾ ಸಲ್ಲಿಸಿದ ನಂತರ ಪ್ರತಿವಾದಿಗಳು ತಮ್ಮ ವಕೀಲರ ಮೂಲಕ ಘನ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ.

2. ದಾವಾ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತು ಪ್ರತಿವಾದಿಗಳ ಪೈಕಿ 1 ನೇ ಪ್ರತಿವಾದಿಯಾದ ಮಾಲಮ್ಮ ಕೋಂ ಬಸವೇಗೌಡ ರವರಿಗೆ ಸ್ವಯಾರ್ಜಿತವಾದ ಸ್ವತ್ತಾಗಿದ್ದು, ಸದರಿ ಸ್ವತ್ತು ಹೆಗ್ಗಡದೇವನಕೋಟೆ ತಾಲ್ಲೂಕು ತಹಶಿಲ್ದಾರ್ ರವರ ಕಾರ್ಯಾಲಯದ ಅಧಿಕೃತ ಜ್ಞಾಪನ ಸಂಖ್ಯೆ: ಎಲ್ ಎನ್ ಡಿ (ಹಂ)/(ಅ)9/95-96 ದಿನಾಂಕಃ22-09-1997 ರ ಭೂ ಮಂಜುರಾತಿ ಮೂಲಕ ಮಂಜೂರಾಗಿ, ಸಾ.ಚೀ.ನಂ.272/97-98 ದಿನಾಂಕಃ 19-11-1997 ರಂದು ಸಾಗುವಳಿ ಚೀಟಿ ಪಡೆದು, 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ನಂ.168, ಎಂ.ಆರ್.ನಂ.19/98-99 ರ ವಿಭಜನೆ ಮೇರೆಗೆ ಖಾತೆಯಾಗಿ ಪ್ರತಿವಾದಿಗಳ ಹಕ್ಕು ಮತ್ತು ಮಾಲೀಕತ್ವಕ್ಕೆ ಒಳಪಟ್ಟು

ಪ್ರತಿವಾದಿಗಳ ಸ್ವಾಧೀನಾನುಭವದಲ್ಲಿರುವ ಸ್ವತ್ತಾಗಿರುತ್ತದೆ, ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದ ಕಂದಾಯವನ್ನು ಪ್ರತಿವಾದಿಗಳೇ ನಿರಂತರವಾಗಿ ಪಾವತಿಸಿಕೊಂಡು ಬಂದಿರುತ್ತಾರೆ, ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಗಳ ಇಷ್ಟಾನುಸಾರ ವಿಕ್ರಯಿಸಲು ಸಂಪೂರ್ಣ ಸ್ವತಂತ್ರರಾಗಿಯೂ, ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಸಹ ಇರುತ್ತಾರೆ.

3. ದಾವಾ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಗಳು ತಮ್ಮ ದರದು ನಿಮಿತ್ತವಾಗಿ ಅಂದರೆ, ಪ್ರತಿವಾದಿಗಳ ಪೈಕಿ 3 ಮತ್ತು 7 ನೇ ಪ್ರತಿವಾದಿಗಳ ಕುಟುಂಬದ ಅವಶ್ಯಕತೆಗಾಗಿ ಮತ್ತು ಇತರೆ ಕೈಸಾಲ ತೀರಿಸಲು ಹಾಗೂ ಮೈನರ್ ಮಕ್ಕಳುಗಳ ಪಾಲನೆ-ಪೋಷಣೆ ಮತ್ತು ವಿಧ್ಯಾಭ್ಯಾಸದ ಖರ್ಚಿಗಾಗಿಯೂ ಸಹ ಮೊಬಲಗು ಬೇಕಾಗಿರುವುದರಿಂದ 3 ನೇ ಪ್ರತಿವಾದಿಯ ಹಿಸ್ಸೆಗೆ ಸೇರಿದ ಒಂದು ಎಕರೆ ಇಪ್ಪತ್ತು ಗುಂಟೆ (1-20) ಮತ್ತು 7 ನೇ ಪ್ರತಿವಾದಿಯ ಹಿಸ್ಸೆಗೆ ಸೇರಿದ ಇಪ್ಪತ್ತು ಗುಂಟೆ (0-20) ಒಟ್ಟು ಎರಡು ಎಕರೆ (2-00) ಜಮೀನಿಗೆ ಈಗಿನ ಮಾರುಕಟ್ಟೆ ಬೆಲೆ ನಗದು ಗೌರ್ನಮೆಂಟ್ ಹದಿಮೂರು ಲಕ್ಷ (13,00,000/-) ರೂಪಾಯಿಗಳಿಗೆ ಶುದ್ಧ ಕ್ರಯಕ್ಕೆ ಕೊಡಲು ಒಪ್ಪಿ, ಕ್ಷಯದ ಪ್ರತಿಫಲದ ಪೈಕಿ ಮುಂಗಡವಾಗಿ ಯೂನಿಯನ್ ಬ್ಯಾಂಕ್ ಆಫ್ ವಿಜಯನಗರ ,ಮೈಸೂರು ಇಲ್ಲಿ ತೆರೆದಿರುವ ಅಕೌಂಟ್ ನಂಬರ್ 2197011000033616 ರ ಮೂಲಕ ಪಡೆದಿರುವ

1. 1 ನೇ ಪ್ರತಿವಾದಿ ಮಾಲಮ್ಮ ರವರಿಗೆ ಚೆಕ್ ನಂ.01380 ಮೊಬಲಗೂ ರೂ. 2,50,000-00.

2. 3 ನೇ ಪ್ರತಿವಾದಿ ಬಸವರಾಜು ರವರಿಗೆ ಚೆಕ್ ನಂ.014381 ಮೊಬಲಗೂ ರೂ.4,00,000-00

3. 7 ನೇ ಪ್ರತಿವಾದಿ ತಮಣ್ಣ ರವರಿಗೆ ಚೆಕ್ ನಂ.014382 ಮೊಬಲಗೂ ರೂ.,2,50-000-00

4. 15 ನೇ ಪ್ರತಿವಾದಿ ಸವಿತ ರವರಿಗೆ ಚೆಕ್ ನಂಬರ್ 014384 ಮೊಬಲಗು ರೂ.2,50,000-00

ಮೇಲ್ಕಂಡಂತೆ ದಿನಾಂಕ:-24-06-2025 ರಂದು ನೀಡಿರುವ ನಾಲ್ಕು ಚೆಕ್‌ಗಳ ಮೂಲಕ ಮತ್ತು ಮೊಬಲಗು ಐವತ್ತು ಸಾವಿರ (50,000/-) ರೂಪಾಯಿಗಳನ್ನು ನಗದು ಮೂಲಕ ಈ ಕೆಳಕಂಡ ಸಾಕ್ಷಿದಾರರ ಸಮಕ್ಷಮ ನಮ್ಮ ಕಕ್ಷಿದಾರರಿಂದ ಪಡೆದುಕೊಂಡಿರುತ್ತೀರಿ, ಈ ರೀತಿಯಾಗಿ ಒಟ್ಟು ಮೊಬಲಗು ಹನ್ನೆರಡು ಲಕ್ಷ (12,00,000/-) ರೂಪಾಯಿಗಳನ್ನು ಚೆಕ್ ಮೂಲಕ ಈ ಕೆಳಕಂಡ ಸಾಕ್ಷಿದಾರರ ಸಮಕ್ಷಮ ನಮ್ಮ ಕಕ್ಷಿದಾರರಿಂದ ಮುಂಗಡವಾಗಿ ಪಡೆದುಕೊಂಡು ದಿನಾಂಕ:-27-06-2025 ರಂದು ಹೆಗ್ಗಡದೇವನಕೋಟೆ ಉಪನೋಂದಣಾಧಿಕಾರಿ ಕಛೇರಿಯ 1 ನೇ ಪುಸ್ತಕದ ದಸ್ತಾವೇಜು ನಂ.ಹೆಚ್.ಡಿ.ಕೆ-1-01937/2025-2026 ರಂತೆ ಕ್ರಯದ ಒಪ್ಪಂದದ ಕರಾರು ಪತ್ರವನ್ನು ವಾದಿಯ ಹೆಸರಿಗೆ ಬರೆಸಿ ನೊಂದಣಿ ಮಾಡಿಸಿಕೊಟ್ಟಿರುತ್ತಾರೆ. ಜಾತಾ ಉಳಿಕೆ ಮೊಬಲಗನ್ನು ಷೆಡ್ಯೂಲ್ ಸ್ವತ್ತನ್ನು ದುರಸ್ಥಿ ಮಾಡಿಸಿ, ಷೆಡ್ಯೂಲ್ ಸ್ವತ್ತಿನ ನೋಂದಣಿಗೆ ಬೇಕಾಗುವ ಸಂಬಂಧಪಟ್ಟ ಗಣಕೀಕೃತ ಆರ್.ಟಿ.ಸಿ, ಎಂ.ಆರ್, ಆಕಾರ್‌ಬಂದ್, ಸರ್ವೆ ನಕ್ಷೆ, ಟಿಪ್ಪಣಿ, ಅಟ್ಲಾಸ್, ನಕ್ಷೆ 11(ಇ), ಎಡಬಲ, 5 ಮತ್ತು 6 ರ ಕಾಫಿ, ಋಣಭಾರ ಪತ್ರ, ಕಂದಾಯ ರಶೀತಿ, ತಹಶೀಲ್ದಾರ್ ಕಛೇರಿಯಿಂದ ಪಡೆದಿರುವ ವಂಶವೃಕ್ಷ ಹಾಗೂ ಇನ್ನಿತರ ದಾಖಲಾತಿಗಳನ್ನು ಸಹ ಪ್ರತಿವಾದಿಗಳ ಖರ್ಚಿನಿಂದ ಒದಗಿಸಿಕೊಟ್ಟ ನಂತರ ನಾಲ್ಕು ತಿಂಗಳ ವಾಯಿದೆ ಒಳಗಾಗಿ ವಾದಿಯ ಹೆಸರಿಗಾಗಲೀ ಅಥವಾ ವಾದಿಯು ಅಪೇಕ್ಷ ಪಟ್ಟವರಿಗಾಗಲೀ ವಾದಿಯ ಖರ್ಚಿನಿಂದಲೇ ಶುದ್ಧ ಕ್ರಯಪತ್ರವನ್ನು ಬರೆಸಿ ಉಪನೊಂದಣಾಧಿಕಾರಿಯವರ ಕಛೇರಿಯಲ್ಲಿ ಉಳಿಕೆ ಕ್ರಯದ ಮೊಬಲಗು ರೂ.1,00,000/- (ಒಂದು ಲಕ್ಷ) ರೂಪಾಯಿಗಳನ್ನು ಸಾಕ್ಷಿದಾರರ ಸಮಕ್ಷಮ ನೊಂದಾಯಿತ ಕ್ರಯಪತ್ರವನ್ನು ನೋಂದಣಿ ಮಾಡಿಸಿಕೊಡುವುದಾಗಿ ಮತ್ತು ದಾವಾ ಸ್ವತ್ತನ್ನು ಕ್ರಯಪತ್ರ ನೊಂದಣಿ ದಿನದಂದೇ ವಾದಿಯ ಸುಪರ್ದಿಗೆ ವಹಿಸಿ ಕೊಡಲು ಪ್ರತಿವಾದಿಗಳು ಒಪ್ಪಿ ವಾದಿಯ ಹೆಸರಿಗೆ ದಾವಾ ಅನುಸೂಚಿ ಸ್ವತ್ತಿನ ಕ್ರಯದ ಒಪ್ಪಂದದ ಕರಾರು ಪತ್ರವನ್ನು 1 ರಿಂದ 3 ನೇ ಪ್ರತಿವಾದಿಗಳು ಹಾಗೂ ಪ್ರತಿವಾದಿ 4 ಮತ್ತು 5 ರವರು ಅಪ್ರಾಪ್ತ ವಯಸ್ಕರರಾಗಿರುವುದರಿಂದ ಅವರ ಪರವಾಗಿ ಮೈನರ್ ಗಾರ್ಡಿಯನ್ನಾಗಿ 3 ನೇ ಪ್ರತಿವಾದಿಯು ಒಪ್ಪಿ ಹಾಗೂ 6 ಮತ್ತು 7 ನೇ ಪ್ರತಿವಾದಿಗಳು ಹಾಗೂ 8 ಮತ್ತು 9 ರವರು ಅಪ್ರಾಪ್ತ ವಯಸ್ಕರರಾಗಿರುವುದರಿಂದ ಅವರ ಪರವಾಗಿ ಮೈನರ್ ಗಾರ್ಡಿಯನ್ನಾಗಿ 7 ನೇ ಪ್ರತಿವಾದಿಯು ಒಪ್ಪಿ ಹಾಗೂ 10 ರಿಂದ 12 ನೇ

ಪ್ರತಿವಾದಿಗಳು ಹಾಗೂ 13 ರವರು ಅಪ್ರಾಪ್ತ ವಯಸ್ಕರರಾಗಿರುವುದರಿಂದ ಅವರ ಪರವಾಗಿ ಮೈನರ್ ಗಾರ್ಡಿಯನ್ನಾಗಿ 12 ನೇ ಪ್ರತಿವಾದಿಯು ಒಪ್ಪಿ ಹಾಗೂ 14 ಮತ್ತು 15 ನೇ ಪ್ರತಿವಾದಿಗಳೆಲ್ಲರೂ ಸೇರಿ ಕ್ರಯದ ಒಪ್ಪಂದದ ಕರಾರು ಪತ್ರವನ್ನು ನೊಂದಣಿ ಮಾಡಿಸಿಕೊಟ್ಟಿರುತ್ತಾರೆ. ನಂತರ ಪ್ರತಿವಾದಿಗಳು ನಿಗಧಿತ ಅವಧಿಯಲ್ಲಿ ಷೆಡ್ಯೂಲ್ ಸ್ವತ್ತಿನ ದಾಖಲಾತಿಗಳನ್ನು ನೀಡಿ ವಾದಿಗೆ ಕ್ರಯಪತ್ರ ನೊಂದಣಿ ಮಾಡಿಸಿಕೊಡಲು ಸಾಧ್ಯವಾಗದ ಕಾರಣ ವಾದಿಯು ವಕೀಲರ ಮೂಲಕ ಪ್ರತಿವಾದಿಗಳಿಗೆ ತಿಳುವಳಿಕೆ ನೋಟೀಸ್ ಜಾರಿ ಮಾಡಿಸಿ, ನೋಟೀಸ್ ಜಾರಿಯಾದ ನಂತರ ಯಾವುದೇ ಉತ್ತರ ಪ್ರತಿವಾದಿಗಳಿಂದ ಬರದೇ ಇದ್ದಾಗ, ವಾದಿಯು ಗೌರವಾನ್ವಿತ ಘನ ನ್ಯಾಯಾಲಯದಲ್ಲಿ ಪ್ರತಿವಾದಿಗಳ ವಿರುದ್ಧ ನಿರ್ಧಿಷ್ಟ ಕರಾರು ಅನುಷ್ಠಾನ ಕಾಯ್ದೆ ಅಡಿಯಲ್ಲಿ ದಾವೆಯನ್ನು ಹೂಡಿರುತ್ತಾರೆ.

4. ಸದರಿ ದಾವಾ ವಿಚಾರಕ್ಕೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿಗಳು ತಮ್ಮ ಗ್ರಾಮಸ್ಥರ ಸಮಕ್ಷಮ ಮತ್ತು ತಮ್ಮ ಹಿತೈಸಿಗಳ ಹಿತವಚನದಿಂದ ದಾವೆಯನ್ನು ನ್ಯಾಯಾಲಯದ ಮುಂದೆ ರಾಜಿ ಮಾಡಿಕೊಳ್ಳಲು ಒಪ್ಪಿರುತ್ತಾರೆ.

5. ವಾದಿ ಮತ್ತು ಪ್ರತಿವಾದಿಗಳು ನ್ಯಾಯಾಲಯದಲ್ಲಿ ರಾಜಿ ಮಾಡಿಕೊಂಡಿರುವ ಪ್ರಕಾರ ಷೆಡ್ಯೂಲ್ ಸ್ವತ್ತಿನ ಕ್ರಯದ ಕರಾರಿನ ಪ್ರಕಾರ ಕ್ರಯದ ಬಾಬು ಉಳಿಕೆ ರೂ.1,00,000/- (ಒಂದು ಲಕ್ಷ) ರೂಪಾಯಿಗಳನ್ನು ವಾದಿಯಿಂದ 1 ಮತ್ತು 3 ನೇ ಪ್ರತಿವಾದಿ ಹಾಗೂ ಪ್ರತಿವಾದಿ 4 ಮತ್ತು 5 ರವರು ಅಪ್ರಾಪ್ತ ವಯಸ್ಕರರಾಗಿರುವುದರಿಂದ ಅವರ ಪರವಾಗಿ ಮೈನರ್ ಗಾರ್ಡಿಯನ್ನಾಗಿ 3 ನೇ ಪ್ರತಿವಾದಿಯು ಒಪ್ಪಿ ಹಾಗೂ 6 ಮತ್ತು 7 ನೇ ಪ್ರತಿವಾದಿಗಳು ಹಾಗೂ 8 ಮತ್ತು 9 ರವರು-ಅಪ್ರಾಪ್ತ ವಯಸ್ಕರರಾಗಿರುವುದರಿಂದ ಅವರ ಪರವಾಗಿ ಮೈನರ್ ಗಾರ್ಡಿಯನ್ನಾಗಿ 7 ನೇ ಪ್ರತಿವಾದಿಯು ಒಪ್ಪಿ ಹಾಗೂ 10 ರಿಂದ 12 ನೇ ಪ್ರತಿವಾದಿಗಳು ಹಾಗೂ 13 ರವರು ಅಪ್ರಾಪ್ತ ವಯಸ್ಕರರಾಗಿರುವುದರಿಂದ ಅವರ ಪರವಾಗಿ ಮೈನರ್ ಗಾರ್ಡಿಯನ್ನಾಗಿ 12 ನೇ ಪ್ರತಿವಾದಿಯು ಒಪ್ಪಿ ಹಾಗೂ 14 ಮತ್ತು 15 ನೇ ಪ್ರತಿವಾದಿಗಳೆಲ್ಲರೂ ಸಹಾ ನಗದು ಮೂಲಕ ಪಡೆದುಕೊಂಡಿರುತ್ತಾರೆ. ಇನ್ನು ಕ್ರಯದ ಬಾಬು ಯಾವುದೇ ಬಾಕಿಗಳು ವಾದಿಯಿಂದ ಪ್ರತಿವಾದಿಗಳಿಗೆ ಬರಬೇಕಾಗಿರುವುದಿಲ್ಲ ಎಂದು ಒಪ್ಪಿರುತ್ತಾರೆ.

6. ವಾದಿಯು ದಾವೆಯ ಪ್ರಾರ್ಥನೆಯಲ್ಲಿ ಕೋರಿರುವಂತೆ ವಾದಿಯ ಪರವಾಗಿ ದಾವೆಯನ್ನು ಡಿಕ್ರಿ ಮಾಡಲು ಪ್ರತಿವಾದಿಗಳು ಒಪ್ಪಿರುತ್ತಾರೆ, ದಾವಾ ಷೆಡ್ಯೂಲ್ ಸ್ವತ್ತನ್ನು ಈ ದಿನವೇ ವಾದಿಯ ಸ್ವಾಧೀನಕ್ಕೆ ಪ್ರತಿವಾದಿಗಳು ನೀಡಿರುತ್ತಾರೆ. ಇನ್ನು ಮುಂದೆ ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಯು ತಮ್ಮ ಅನುಕೂಲಕ್ಕೆ ಅನುಗುಣವಾಗಿ ವ್ಯವಸಾಯ ಮಾಡಲು ಮತ್ತು ಷೆಡ್ಯೂಲ್ ಸ್ವತ್ತಿನಲ್ಲಿ ವಾದಿಗೆ ಅಗತ್ಯಕ್ಕನುಗುಣವಾಗಿ ಜಮೀನನ್ನು ಅಭಿವೃದ್ಧಿಪಡಿಸಿಕೊಂಡು ಜಮೀನನ್ನು ಅನುಭವಿಸಿಕೊಂಡು ಹೋಗಲು ಪ್ರತಿವಾದಿಗಳು ಯಾವುದೇ ರೀತಿಯ ತಂಟೆ-ತಕರಾರು ಮತ್ತು ಅಡಚಣೆ ಮಾಡುವುದಿಲ್ಲವೆಂದು ಒಪ್ಪಿರುತ್ತಾರೆ. ಸದರಿ ದಾವಾ ಷೆಡ್ಯೂಲ್ ಜಮೀನಿಗೆ ಈ ದಿನದಿಂದ ವಾದಿಯೇ ಸ್ವಾಧೀನಾನುಭವವನ್ನು ಹಾಗೂ ಹಕ್ಕು ಬಾದ್ಯತೆಯನ್ನು ಹೊಂದಿ ಅನುಭವಿಸಿಕೊಂಡು ಹೋಗಲು ಹಕ್ಕನ್ನು ಹೊಂದಿರುತ್ತಾರೆ.

7. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಈ ದಿನ ಘನ ನ್ಯಾಯಾಲಯದಲ್ಲಿ ಪ್ರತಿವಾದಿಗಳು ವಾದಿಯ ವಶಕ್ಕೆ ನೀಡಿರುತ್ತಾರೆ. ದಾವಾ ಷೆಡ್ಯೂಲ್ ಸ್ವತ್ತನ್ನು ದುರಸ್ಥಿ ಮಾಡಿಸಲು ಯಾವುದಾದರೂ ಕಾಗದ ಪತ್ರಗಳಿಗೆ ಸಹಿ ವಗೈರೆಗಳು ಬೇಕಾದಲ್ಲಿ ಪ್ರತಿವಾದಿಗಳು ತಪ್ಪದೇ ಸಹಿ ಮಾಡಿಕೊಡಲು ಒಪ್ಪಿರುತ್ತಾರೆ. ಸದರಿ ದಾವಾ ಷೆಡ್ಯೂಲ್ ಸ್ವತ್ತು ದುರಸ್ಥಿಯಾದ ನಂತರ ಹೊಸ ಸರ್ವೆ ನಂಬರ್ ಬರುತ್ತದೆ ಆ ಪ್ರಕಾರ ಹೊಸ ಸರ್ವೆ ನಂಬರ್ ಬಂದ ನಂತರ ಸದರಿ ಸ್ವತ್ತಿನ ಹದ್ದು ಬಸ್ತು, ಪೋಡ್ ಹಾಗೂ ಸ್ಕೆಚ್ ಮಾಡಿಸಿದ ನಂತರ ಒಂದು (01) ತಿಂಗಳ ವಾಯಿದೆ ಒಳಗೆ ಕ್ರಯಪತ್ರ ನೊಂದಣಿ ಮಾಡಿಸಿಕೊಡಲು ಪ್ರತಿವಾದಿಗಳು ಒಪ್ಪಿಕೊಂಡಿರುತ್ತಾರೆ. ವಾದಿಯು ದಾವಾ ಸ್ವತ್ತನ್ನು ಕ್ರಯಪತ್ರ ಮಾಡಿಸಿಕೊಳ್ಳುವಾಗ ಪ್ರತಿವಾದಿಗಳು ತಪ್ಪದೇ ಹಾಜರಾಗಿ ಕ್ರಯಪತ್ರ ಮಾಡಿಕೊಡುವುದಾಗಿ ಒಪ್ಪಿಕೊಂಡಿರುತ್ತಾರೆ. ತಪ್ಪಿದ್ದಲ್ಲಿ ವಾದಿಯು ಗೌರವಾನ್ವಿತ ಘನ ನ್ಯಾಯಾಲಯದಲ್ಲಿ ಡಿಕ್ರಿ ಆದೇಶದಂತೆ ಪ್ರತಿವಾದಿಗಳ ವಿರುದ್ಧ ಜಾರಿ ಪ್ರಕರಣ ಸಲ್ಲಿಸಿ ಘನ ನ್ಯಾಯಾಲಯದಿಂದ ನ್ಯಾಯಾಲಯದ ನಿಯೋಗಿಯನ್ನು ನೇಮಿಸಲು ಆದೇಶ ಪಡೆದುಕೊಂಡು ನಿಯೋಗಿಯ ಮೂಲಕ ಪೆಡ್ಯೂಲ್ ಸ್ವತ್ತಿನ ಕ್ರಯಪತ ನೊಂದಣಿ

ಮಾಡಿಸಿಕೊಳ್ಳಲು ಕಾನೂನುರೀತ್ಯಾ ಹಕ್ಕನ್ನು ಹೊಂದಿರುತ್ತಾರೆ ಎಂಬುದಾಗಿ ಪ್ರತಿವಾದಿಗಳು ನ್ಯಾಯಾಲಯದ ಮುಂದೆ ರಾಜಿ ಮೂಲಕ ಒಪ್ಪಿಕೊಂಡಿರುತ್ತಾರೆ.

8. ಪ್ರತಿವಾದಿ 4 ಮತ್ತು 5 ರವರು ಅಪ್ರಾಪ್ತ ವಯಸ್ಕರರಾಗಿರುವುದರಿಂದ ಅವರ ಪರವಾಗಿ ಸದರಿ ದಾವೆಯಲ್ಲಿ ಅವರ ಖಾಸ ತಂದೆಯಾದ 3 ನೇ ಪ್ರತಿವಾದಿ ಬಸವರಾಜು ರವರು ಮತ್ತು ಪ್ರತಿವಾದಿ 8 ಮತ್ತು 9 ರವರು ಅಪ್ರಾಪ್ತ ವಯಸ್ಕರರಾಗಿರುವುದರಿಂದ ಅವರ ಪರವಾಗಿ ಸದರಿ ದಾವೆಯಲ್ಲಿ ಅವರ ಖಾಸಾ ತಂದೆಯಾದ 7 ನೇ ಪ್ರತಿವಾದಿ ತಮ್ಮಣ್ಣ ರವರು ಹಾಗೂ 13 ನೇ ಪ್ರತಿವಾದಿಯು ಅಪ್ರಾಪ್ತ ವಯಸ್ಕರರಾಗಿರುವುದರಿಂದ ಅವರ ಪರವಾಗಿ ಸದರಿ ದಾವೆಯಲ್ಲಿ ಅವರ ಖಾಸಾ ತಾಯಿಯಾದ 12 ನೇ ಪ್ರತಿವಾದಿ ಪವಿತ್ರ ರವರುಗಳು ಸದರಿ ದಾವೆಯಲ್ಲಿ ನೈಸರ್ಗಿಕ ಸಂರಕ್ಷಕರಾಗಿ ಪ್ರತಿನಿಧಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಗಳು ಮಾರಾಟ ಮಾಡಲು ಒಪ್ಪಿ ಕ್ರಯದ ಒಪ್ಪಂದದ ಕರಾರು ಮಾಡಿರುವುದು ಕುಟುಂಬದ ಅವಶ್ಯಕತೆಗಾಗಿಯೂ ಮತ್ತು ಪ್ರತಿವಾದಿಗಳ ಪೈಕಿ 3 ಮತ್ತು 7 ನೇ ಪ್ರತಿವಾದಿಗಳ ಕುಟುಂಬದ ಅವಶ್ಯಕತೆಗಾಗಿ ಮತ್ತು ಇತರೆ ಕೈಸಾಲ ತೀರಿಸಲು ಹಾಗೂ ಮೈನರ್ ಮಕ್ಕಳುಗಳ ಪಾಲನೆ-ಪೋಷಣೆ ಮತ್ತು ವಿಧ್ಯಾಭ್ಯಾಸದ ಖರ್ಚಿಗಾಗಿಯೂ ಅನುಕೂಲಕರವಾಗಿರುತ್ತದೆ.

9. ಪ್ರತಿವಾದಿ 2 ರವರು ದಾವೆಯನ್ನು ಹೂಡಿದ ನಂತರ ದಿನಾಂಕ:-17-12-2025 ರಂದು ಮೃತರಾಗಿರುತ್ತಾರೆ, ಆ ಕಾರಣ ಸದರಿ ದಾವೆಯಲ್ಲಿ ಈಗಾಗಲೇ ಇವರ ವಾರಸುದಾರರಾದ ಡಿ1, ಡಿ3, ಡಿ7, ಡಿ11 ರಿಂದ 15 ರವರು ವಾರಸುದಾರರಾಗಿ ನಮೂದಾಗಿರುತ್ತಾರೆ.

10. ವಾದಿಯು ನ್ಯಾಯಾಲಯಕ್ಕೆ ಸಲ್ಲಿಸಿರುವ ಪೂರ್ತಾ ನ್ಯಾಯಾಲಯದ ಶುಲ್ಕವನ್ನು ವಾದಿಗೆ ಹಿಂದಿರುಗಿಸಬೇಕಾಗಿ ವಾದಿಯು ಪ್ರಾರ್ಥಿಸಿರುತ್ತಾರೆ.

ಆದ್ದರಿಂದ ವಾದಿ ಮತ್ತು ಪ್ರತಿವಾದಿ 1 ಮತ್ತು 3 ರಿಂದ 15 ನೇ ಪ್ರತಿವಾದಿಗಳು ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಸದರಿ ರಾಜಿ ಅರ್ಜಿಯನ್ನು

ಪುರಸ್ಕರಿಸಿ ದಾವೆಯನ್ನು ವಾದಿಯ ಪರವಾಗಿ ಡಿಕ್ರಿ ಮಾಡಬೇಕೆಂದು ನ್ಯಾಯಾ ಮತ್ತು ಸಮಾನತೆಯ ದೃಷ್ಟಿಯಿಂದ ಪ್ರಾರ್ಥಿಸಿಕೊಳ್ಳುತ್ತಾರೆ.

## ಷೆಡ್ಯೂಲ್ ಸ್ವತ್ತಿನ ವಿವರ:-

ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು, ಹಂಪಾಪುರ ಹೋಬಳಿ, ಕಲಕೊಡು ಗ್ರಾಮದಲ್ಲಿರುವುದು, ಹಳೇ ಸ.ನಂ.5/27, ಒಟ್ಟುಗೂಡಿಸು ಮೇರೆ ಹೊಸ ಸರ್ವೆ ನಂಬರು ಐದು (ಸ.ನಂ.5) ರಲ್ಲಿರುವ ಒಟ್ಟು ವಿಸ್ತೀರ್ಣ 530.22.00.00 ವುಳ್ಳ ಜಮೀನಿನಲ್ಲಿ ಮಾಲಮ್ಮ ಕೋಂ ಬಸವೇಗೌಡ ರವರ ಹೆಸರಿನಲ್ಲಿ ಖಾತೆಯಿರುವ ನಾಲ್ಕು ಎಕರೆ, ಮೂವತ್ತೇರಡು ಗುಂಟೆ (4-32,00.00) ವುಳ್ಳ ಜಮೀನಿನ ಪೈಕಿ ಎರಡು (2-00) ಎಕರೆ ಕ್ರಯದ ಒಪ್ಪಂದದ ಕರಾರು ಪತ್ರದ ಸ್ವತ್ತಿಗೆ ಚೌತರ್ಫು:

| | | |
|---|---|---|
| ಪೂರ್ವಕ್ಕೆ | : | ಸರ್ಕಾರಿ ರಸ್ತೆ. |
| ಪಶ್ಚಿಮಕ್ಕೆ | : | ಇದೇ ಸ.ನಂ. ಪೈಕಿ ಉಳಿಕೆ ಜಮೀನು. |
| ಉತ್ತರಕ್ಕೆ | : | ಚನ್ನನಾಯಕ ರವರ ಜಮೀನು. |
| ದಕ್ಷಿಣಕ್ಕೆ | : | ಜನತಾನಗರ ಕೃಷ್ಣ ರವರ ಜಮೀನು. |

ನ್ಯಾಯಾಲಯದ ಖರ್ಚು-ವೆಚ್ಚಗಳನ್ನು ಉಭಯ ಪಕ್ಷಗಾರರು ಅವರವರೇ ಭರಿಸಿಕೊಳ್ಳಲು ಒಪ್ಪಿಕೊಂಡಿರುತ್ತಾರೆ.

ಈ ಮೇಲೆ ಹೇಳಿರುವ ಎಲ್ಲಾ ಅಂಶಗಳನ್ನು ವಾದಿ ಮತ್ತು ಪ್ರತಿವಾದಿಗಳು ಸಂತೋಷದಿಂದ ಮತ್ತು ಖುದ್ದು ರಾಜಿಯಿಂದ ಒಪ್ಪಿ ಓದಿಸಿ, ಕೇಳಿ, ತಿಳಿದುಕೊಂಡು ಸರಿಯಿದೆ ವ ಒಪ್ಪಿ ಈ ರಾಜಿ ಒಪ್ಪಂದಕ್ಕೆ ಈ ದಿನ ಸಹಿ ಮಾಡಿರುತ್ತಾರೆ.

**And it is further ordered that, the compromise petition filed by the parties is part and parcel of the compromise decree.**

**And it is further ordered that, office is directed to return the Court Fee to the plaintiff.**

Given under my hand and seal of this Court on the 14th day of March, 2026.

SENIOR CIVIL JUDGE & JMFC
H.D.KOTE.

**<u>MEMORANDUM OF COST INCURRED IN THE SUIT</u>**

| | **Plaintiff/s** | **Defendant/s** |
|---|---|---|
| 1. Court fee on Plaint | 77150-00 | -- |
| 2. Service of Process | 180-00 | -- |
| 3. Advocate fee | -- | -- |
| **TOTAL** | **77330-00** | **--** |

SENIOR CIVIL JUDGE & JMFC
H.D.KOTE.